ಅವರ ಮಾತುಗಳನ್ನು ಕೇಳುತ್ತಿದ್ದ ಚೀಫ್ ಕಟುವಾಗಿ 'ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡುತ್ತ ಹೀಗೆಲ್ಲ ಅಪಪ್ರಚಾರ ಮಾಡಬಾರದು ಅಂತ ಮೊದಲೇ ಹೇಳಿದ್ದೆ' ಎಂದರು.

'ಆದರೆ ಯಾರಿಗೂ ತಿಳಿಸದೆ ಮದುವೆ ಆಗ್ತಾರೆ ಅಂದರೆ...' ಸ್ವಾಮಿ ಗೊಣಗಿದರು.

'ಯಾಕ್ರೀ ಹೇಳಿಲ್ಲ? ನನಗೆ ಹೇಳಿದ್ದಾರೆ. ಕೃಷ್ಣ ಕೇಸ್ ನಿಮಿತ್ತವಾಗಿ ಕಾಶ್ಮೀರಕ್ಕೆ ಹೊರಟರೆ ತಾನೂ ಬರುವುದಾಗಿ ಕಲ್ಯಾಣಿ ಹಟ ಹಿಡಿದಳು'

'ಹೌದು. ಆಫೀಸ್ ಖರ್ಚಿನಲ್ಲಿ ಹನಿಮೂನ್ ಮುಗಿಸಿಕೊಂಡು ಬರ್ತಾರೆ' ಬಾಸ್‌ಗೆ ಕೇಳಿಸದಂತೆ ಪಕ್ಕದಲ್ಲಿದ್ದ ಆಫೀಸರ್‌ಗೆ ಹೇಳಿದನು ಸ್ವಾಮಿ, ಆದರೂ ಅವನ ಮಾತು ಚೀಫ್‌ಗೆ ಕೇಳಿಸಿತು.

'ಸ್ವಂತ ಕೆಲಸಕ್ಕಾಗಿ ಟೂರ್ ಹಾಕುವ ನೀವು ಇದಕ್ಕಿಂತ ಗ್ರೇಟ್ ಆಗಿ ಎಲ್ಲಿ ಯೋಚಿಸುತ್ತೀರಿ. ಆದರೆ ಇಡೀ ಖರ್ಚನ್ನು ಕಲ್ಯಾಣಿ ಭರಿಸುತ್ತಾಳೆ'

'ಅವಳೇಕೆ ಖರ್ಚು ಮಾಡಬೇಕು? ಇದು ಡಿಪಾರ್ಟ್ಮೆಂಟ್ ಕೆಲಸ' ಎಂದನು ಮತ್ತೊಬ್ಬ ಆಫೀಸರ್.

'ನಮ್ಮ ಆಡಿಟಿಂಗ್ ಸೆಕ್ಷನ್‌ನವರು ಅಷ್ಟು ಸುಲಭವಾಗಿ ಒಪ್ಪುತ್ತಾರಾ?

'ಬಾಂಬ್ ಬ್ಲಾಸ್ಟ್‌ಗೂ ಬ್ಯಾಂಕ್ ಆಫೀಸರ್‌ನ ಹೆಂಡತಿಗೂ ಏನು ಸಂಬಂಧ? ಅವಳ ಫೋನ್‌ನಿಂದ ಅಲ್ಲಿಗೆ ಕಾಲ್ಸ್ ಹೋಗಿವೆ ಅಂದ ಮಾತ್ರಕ್ಕೆ ಕಾಶ್ಮೀರಕ್ಕೆ ಹೋಗುವ ಅಗತ್ಯ ಏನಿದೆ? ಇಂತಹ ಕ್ಷೈರಿಗಳನ್ನು ಮಾಡುತ್ತಾರೇನೋ ಎಂದು ನಾನು ಯೋಚಿಸಿದೆ. ಆದರೆ ಕಲ್ಯಾಣಿ ಒಂದು ಕ್ಷಣವೂ ಯೋಚಿಸದೆ ತಾನೇ ಖರ್ಚು ಭರಿಸುತ್ತೇವೆಂದು ಹೇಳಿ ಕೃಷ್ಣನ ಜೊತೆ ಹೋದಳು'

'ಹೋಗಲಿ ಬಿಡಿ... ಮೊದಲೇ ತಂದೆ ತಾಯೀನ ಕಳೆದುಕೊಂಡಿದ್ದಾಳೆ.... ಬೇಗ ಒಬ್ಬ ಜೊತೆಗಾರನನ್ನು ಹುಡುಕಿಕೊಂಡಳು, ಬುದ್ಧಿವಂತೆ ಆ ಹುಡುಗಿ'.

'ತಂದೆ ಹೋಗಿಲ್ಲ ಸ್ವಾಮೀ, ಅವರಿಗಾಗಿಯೇ ಇವರಿಬ್ಬರೂ ಹೋಗಿರುವುದು ಅದರಲಿ, ನಮ್ಮ ಆಫೀಸ್ ಮೀಟಿಂಗ್‌ನಲ್ಲಿ ಇಂತಹ ವಿಷಯ ಬಂದಿದ್ದು ನಾಚಿಕೆಗೇಡು... ಈ ವಿಷಯವನ್ನು ಇಲ್ಲಿಗೇ ಬಿಡೋಣ' ಎಂದು ಮಾತು ಮುಗಿಸಿದರು ಚೀಫ್.

—13—

ಮೇಲಿನ ಘಟನೆ ನಡೆಯುವುದಕ್ಕಿಂತ ಎರಡು ದಿನ ಹಿಂದೆಯೇ ಅವರಿಬ್ಬರೂ ಕಾಶ್ಮೀರದ ಡ್ರಾಸ್‌ಗೆ ಹೊರಟರು.

ಹಿಮಾಲಯ ಪರ್ವತ ಶ್ರೇಣಿಗಳ ನಡುವೆ, ಕಣಿವೆಯಲ್ಲಿದೆ ಭಾರತದ ಅತ್ಯಂತ ಶೀತಲ ಪ್ರದೇಶ 'ಡ್ರಾಸ್'. ಆ ಸಣ್ಣ ಪಟ್ಟಣವನ್ನು ಲಡಾಕ್ ಯುದ್ಧ ಪ್ರದೇಶಕ್ಕೆ ಮುಖ್ಯದ್ವಾರ ಎನ್ನುತ್ತಾರೆ. ಕಾರ್ಗಿಲ್ ಯುದ್ಧದಲ್ಲಿ ಈ ಪಟ್ಟಣದ ಮೇಲೆಯೇ ಪಾಕಿಸ್ತಾನ್ ಬಾಂಬ್‌ಗಳ ಮಳೆ ಸುರಿಸಿದ್ದು. ಇದು ಅಮರವೀರರ ಸ್ತೂಪವಿರುವ ಊರು.

ವಿಮಾನದಲ್ಲಿ ದೆಹಲಿ ತಲುಪಿ ಅಲ್ಲಿಂದ ಶ್ರೀನಗರ್‌ವರೆಗೆ ಬಸ್ ಪ್ರಯಾಣ ಮಾಡಿ, ರಾತ್ರಿ ಅಲ್ಲಿ ಮಲಗಿದ್ದು ಬೆಳಿಗ್ಗೆ ಡ್ರಾಸ್‌ಗೆ ಹೊರಡಬೇಕು ಎಂದು ಕೊಂಡರು. ಶ್ರೀನಗರ್ ಹೋಟೆಲ್‌ನಲ್ಲಿ ಚೆಕ್‌ಇನ್ ಆಗುವ ಸಮಯದಲ್ಲಿ 'ರೂಂಬ್ಯಾರಿಫ್ ಜಾಸ್ತಿ ಇದೆ. ಒಂದು ರೂಂ ಬುಕ್ ಮಾಡಿ ಸಾಕು' ಎಂದನು.

'ಇಬ್ಬರೂ ಒಂದೇ ರೂಮು...' ಗೊಣಗಿದನು ಕೃಷ್ಣ.

'ನಾವು ಡೆಲ್ಲಿಯಿಂದ ಶ್ರೀನಗರ್‌ಗೆ ವಿಮಾನದಲ್ಲಿ ಹೋಗದೆ ಇರುವುದಕ್ಕೆ ಕಾರಣ ಏನು?' ಎಂದು ಪ್ರಶ್ನಿಸಿದಳು.

'ಅನಗತ್ಯವಾದ ಖರ್ಚು ಅಂತ ನೀವೇ ಹೇಳಿದರಲ್ಲ?'

'ಈಗಲೂ ಅದೇ ಹೇಳುತ್ತಿದ್ದೇನೆ'

ಕೋಣೆಯಲ್ಲಿ ಡಬಲ್ ಬೆಡ್, ಬಹಳ ದಣಿದಿದ್ದ ಅವಳು ಆ ರಾತ್ರಿ ಬೇಗ ನಿದ್ದೆಗೆ ಜಾರಿದಳು. ಅವನು ನಿದ್ರಿಸಲಿಲ್ಲ. ಹಾಲನ್ನು ಉಪ್ಪು ಒಡೆಯುತ್ತದೆ. ಹಾಲಿನ ಸಮುದ್ರದಲ್ಲಿ ಉಪ್ಪಿನ ದಿಣ್ಣೆಯ ಮೇಲೆ ಮಲಗಿದ ಫೀಲಿಂಗ್! ಅರ್ಥಹೀನ ಉಪಮಾನ ಅನಿಸಿತು ಅವನಿಗೆ.

ಮರುದಿನ ಡ್ರಾಸ್‌ಗೆ ಹೊರಟರು. ಆದರೆ ಪ್ರಯಾಣವು ಅಂದುಕೊಂಡಷ್ಟು ಸುಖಕರವಾಗಿರಲಿಲ್ಲ. ಕಾಶ್ಮೀರ ಎಂದರೆ ಉದ್ಯಾನವನಗಳು ಮಾತ್ರವಲ್ಲ ಹಿಮ ಪರ್ವತದಲ್ಲಿನ ದರಿದ್ರ ರಸ್ತೆ, ಒಣಗಿಹೋದ ಝರಿಗಳೂ ಇರುತ್ತವೆಂದು ಬಹಳ ಮಂದಿಗೆ ತಿಳಿದಿಲ್ಲ. ಮನುಷ್ಯ ವಾತಾವರಣವನ್ನು ಹಾಳು ಮಾಡಿದರೆ, ವಾತಾವರಣ ಪ್ರಕೃತಿಯನ್ನು ಹಾಳು ಮಾಡಿತು. ಯುದ್ಧವು ದುಃಖವನ್ನು, ಮತವು ಸೇಡನ್ನು ಬೆಳೆಸಿದ್ದವು.

ಬಸ್‌ನಿಂದ ಹೊರಗೆ ನೋಡುತ್ತಾ 'ಇಂದಿನ ಈ ಪ್ರಕೃತಿಯನ್ನು ಕಂಡರೆ ಅಲ್ಲಸಾನಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ' ಎಂದಳು.

'ಅಲ್ಲಸಾನಿ ಅಂದರೆ? ಖಮ್ಮಂ ಹತ್ತಿರ ಇದೆಯಲ್ಲ, ಅದೇನಾ?'

'ಅದು ಕಿನ್ನರಸಾನಿ. ನಿಮ್ಮ ಜೊತೆ ಸಾಹಿತ್ಯ ಚರ್ಚೆ ಮಾಡ್ತೀನಲ್ಲ, ನನ್ನ ಕರ್ಮ' ಎಂದು ಹಣೆ ಚಚ್ಚಿಕೊಂಡಳು.

'ಎಲ್ಲರಿಗೂ ಎಲ್ಲವೂ ತಿಳಿದಿರಬೇಕೆಂದೇನೂ ಇಲ್ಲ. 'ಆ್ಯಂಟೀ ಟೆರರಿಸ್ಟ್ ಸ್ಕ್ವಾಡ್', 'ಡಿಫೆನ್ಸ್ ಇಂಟೆಲಿಜೆನ್ಸ್', 'ರಾ', 'ಸಿಟ್' ಈ ನಾಲ್ಕಕ್ಕೆ ವ್ಯತ್ಯಾಸವೇನು ಹೇಳಿ ನೋಡೋಣ.. ಅಷ್ಟೆ ಏಕೆ– ಸಿಬಿಐಗೆ, ಸಿಐಡಿಗೆ ವ್ಯತ್ಯಾಸ ಏನು?'

'ಗೊತ್ತಿಲ್ಲ' ಎಂದಳು ಕಲ್ಯಾಣಿ. ನಿಜಕ್ಕೂ ಅವಳಿಗೆ ತಿಳಿದಿತ್ತು, ಆದರೆ ಹೇಳಲಿಲ್ಲ.

'ನೋಡಿದಿರಾ, ಎಲ್ಲವೂ ಎಲ್ಲರಿಗೂ ತಿಳಿದಿರುವುದಿಲ್ಲ. ಹೇಳ್ತೇನೆ ಕೇಳಿ.

ಐ.ಡಿ. ರಾಜ್ಯಕ್ಕೆ ಸೇರಿದ ವಿಭಾಗ. ಸಿ.ಬಿ.ಐ. ಕೇಂದ್ರಕ್ಕೆ ಸಂಬಂಧಿಸಿದ್ದು. ನಮ್ಮ ದೇಶದಲ್ಲಿ ಆರ್ಥಿಕ, ರಾಜಕೀಯ ಅಪರಾಧಗಳನ್ನು ಪರಿಶೋಧಿಸುತ್ತದೆ. ಇನ್ನು, ಗಡಿಯಾಚೆ ಪರದೇಶಗಳಲ್ಲಿ ಗೂಢಚರ್ಯೆ ಮಾಡುವುದು 'ರಾ'! ದೇಶದೊಳಗೆ ರಕ್ಷಣೆ ವ್ಯವಸ್ಥೆ ನೋಡಿಕೊಳ್ಳುವುದು ಡಿಫೆನ್ಸ್ ಇಂಟೆಲಿಜೆನ್ಸ್! ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದ ವಿಭಾಗ ಎ.ಟಿ. ಎಸ್.!..... ಸ್ಮಗ್ಲಿಂಗ್ ಮೊದಲಾದ ಅಪರಾಧಗಳಿಗೆ ಸಂಬಂಧಿಸಿದ್ದು 'ಸಿಟ್'. ಕಾಡುಪ್ರಾಣಿಗಳನ್ನು ಬೇಟೆಯಾಡುವ ಪೋಚರ್ಸ್‌ಗಳನ್ನು ಹಿಡಿಯಲಿಕ್ಕೆ ವೈಲ್ಡ್‌ಲೈಫ್ ಕ್ರೈಂ ಕಂಟ್ರೋಲ್ ಬ್ಯೂರೋ....' ಒಂದೇ ಉಸಿರಿಗೆ ಹೇಳಿದನು ಕೃಷ್ಣ.

'ನಿಮಗೆ ನಿಜವಾಗಿ ಬಹಳ ವಿಷಯ ತಿಳಿದಿದೆ ಕೃಷ್ಣಾ'

'ಥ್ಯಾಂಕ್‌ಯೂ, ಇಷ್ಟು ದಿನಕ್ಕೆ ನನಗೂ ಸ್ವಲ್ಪ ಬುದ್ಧಿಯಿದೆ ಅಂತ ನೀವು ಒಪ್ಪಿಕೊಂಡಿರಿ. ಅದಿರಲಿ 'ಅಲ್ಲಸಾನಿ' ಅಂತ ಏನೋ ಹೇಳಿದಿರಲ್ಲ?'

'ಅಲ್ಲಸಾನಿ ಪೆದ್ದನ ಒಬ್ಬ ಮಹಾಕವಿ. ತಾವು ಬರೆಯುವ ಪ್ರತಿ ಪದದ ಅರ್ಥವು ಆ ಪದವೇ ಧ್ವನಿಸುವ ಹಾಗೆ ಬರೆದಿದ್ದಾರೆ. ಕೋಗಿಲೆಯ 'ಕುಹೂ', ನೀರಿನ ಸಪ್ಪಳ, 'ಸ್ಪ್ಲಾಷ್', ಸಿಂಹ 'ರೋರಿಂಗ್'.... ಈ ರೀತಿಯ ಪದಗಳು. ಅಲ್ಲಸಾನಿ 'ಶಿರಸ್–ಸರಜ್–ಝರಿ' ಎಂದಾಗ ಮೇಲಿಂದ ಧುಮ್ಮಿಕ್ಕುವ ಝರಿಗಳ ಸದ್ದು, 'ಅಭಾಂಗ–ತರಂಗ–ಮೃದಂಗ' ಎಂದಾಗ ಅವು ಮಾಡುವ ಮೃದಂಗ ನಾದ.... ಆ ಪದ್ಯವನ್ನು ಓದುತ್ತಿದ್ದರೆ ಇವೆಲ್ಲ ಕಾಣಿಸುವುದು ಮಾತ್ರವಲ್ಲ, ಕೇಳಿಸುತ್ತವೆ ಕೂಡ.'

'ಇದೆಲ್ಲ ನಿಮಗೆ ಹೇಗೆ ತಿಳಿಯಿತು ಕಲ್ಯಾಣಿ?' ಮೆಚ್ಚುಗೆಯಿಂದ ಕೇಳಿದನು ಕೃಷ್ಣ.

'ಐಐಟಿ ಆದ ಮೇಲೆ ಗ್ರೂಪ್ ಒನ್‌ಗೆ ಪ್ರಿಪೇರ್ ಆಗುತ್ತಿದ್ದೇನೆ. ಅಷ್ಟೇ ಅಲ್ಲ, ಅಪ್ಪನ ಪ್ರೋತ್ಸಾಹ ನೆನಪಾಗಿ ಅವಳ ಮುಖ ಬಾಡಿತು.

ಅಷ್ಟರಲ್ಲಿ ಡ್ರಾಪ್ ತಲುಪಿತು. ಆದರೆ ಅವರ ಕೆಲಸ ಅವರು ತಿಳಿದಷ್ಟು ಸುಲಭವಾಗಿ ಆಗಲಿಲ್ಲ.

ಡ್ರಾಸ್ ಪಟ್ಟಣದಿಂದ ಹತ್ತು ಕಿಲೋ ಮೀಟರ್ ದೂರದಲ್ಲಿರುವ ಸಣ್ಣ ಊರು 'ಕಿಲ್ಮಂಜಾ'. ಅಲ್ಲಿನ ಕಿರಾಣಿ ಅಂಗಡಿಯದು ಆ ಲ್ಯಾಂಡ್ ಲೈನು. ಆ ಊರು ತಲುಪುವಷ್ಟರಲ್ಲಿ ಮೈಕೈ ಮುರಿದ ಹಾಗಾಗಿತ್ತು.

ತಾವು ಪೊಲೀಸರೆಂದು ಹೇಳಿದ ಕೂಡಲೆ ಅಂಗಡಿಯಲ್ಲಿದ್ದ ಹುಡುಗ ಬಹಳ ಹೆದರಿದನು. ಐದು ನಿಮಿಷ ಸಮಾಧಾನ ಹೇಳಿದ ನಂತರವೇ ಅವನು ಮಾಮೂಲು ಮನುಷ್ಯನಾಗಿದ್ದು, ಕಾಶ್ಮೀರದಲ್ಲಿ ಜನಸಾಮಾನ್ಯರ ಮೇಲೆ ಸೆಕ್ಯೂರಿಟಿ ಫೋರ್ಸ್ ದಬ್ಬಾಳಿಕೆ ಹೇಗಿರುತ್ತದೆ ಎನ್ನುವುದಕ್ಕೆ ಇದೊಂದು ಉದಾಹರಣೆ.

'ಊರಿನ ಎಲ್ಲರಿಗೆ ಫೋನ್ ಕಾಲ್ಸ್ ಬರುತ್ತದೆ ಸರ್. ಕಾಲ್ ಮಾಡಿದವರು ಹೆಸರು ಹೇಳುತ್ತಾರೆ. ನಾನು ಹೋಗಿ ಅವರನ್ನು ಕರೆ ತರುತ್ತೇನೆ. ಅದಕ್ಕೆ ಅವರೆಲ್ಲ ಪ್ರತಿಸಲ ಎರಡು ರೂಪಾಯಿ ಕೊಡುತ್ತಾರೆ.'

ಬ್ಯಾಂಕ್ ಆಫೀಸರ್ ಹೆಂಡತಿಯ ಫೋನ್‌ನಿಂದ ಕರೆ ಮಾಡಿದ್ದ ಕರೆ ನಂಬರ್ ತೋರಿಸಿ 'ಈ ನಂಬರ್ ಯಾರದು?' ಎಂದು ಕೃಷ್ಣ ಕೇಳಿದನು.

'ದಿನಕ್ಕೆ ಹತ್ತು ಕಾಲ್ಸ್ ಬರುತ್ತವೆ ಸಾರ್, ಹೆಸರು ತಿಳಿಯದಿದ್ದರೆ ಹೇಳುವುದು ಕಷ್ಟ?'

ಕಲ್ಯಾಣಿಯ ಮುಖದಲ್ಲಿ ನಿರಾಸೆ ಸ್ಪಷ್ಟವಾಗಿ ಕಾಣಿಸಿತು.

'ಹೊರಗಿನಿಂದ ಫೋನ್ ಕಾಲ್ ಬರುವ ಮಂದಿ